ಕೊಡುವುದಕ್ಕೆ ಸಿದ್ಧವಾಗಿದೆ. ಆ ವಿಚಾರದಲ್ಲಿ ಮಾನ್ಯ ಸದಸ್ಯರು ಯಾವುದೇ ಅಳಕು ಇಟ್ಟುಕೊಳ್ಳಬೇಕಾಗಿಲ್ಲ. ಕುಡಿಯುವ ನೀರಿಗೆ ಹಣವನ್ನು ಒದಗಿಸುವಂಥ ಜವಾಬ್ದಾರಿ ಸರ್ಕಾರದ ಮೇಲಿದೆ. ಅದಕ್ಕೆ ಹಣವನ್ನು ಒದಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜು : ಇದು ಎಲ್ಲಾ ಜಿಲ್ಲೆಗಳಿಗೂ ಅನ್ವಯವಾಗಬೇಕು.

24. ಮಂಡ್ಯ ತಾಲ್ಲೂಕಿನ ಬಿಳಿದೇಗಿಲು ಗ್ರಾಮದಲ್ಲಿ ತಮ್ಮೇಗೌಡ ಉರುಫ್ ಪುಟ್ಟಸ್ವಾಮಿ ಎಂಬುವರು ಸಾಲದ ಬಾಧೆ ತಡೆಯಲಾರದೆ ಆತ್ಮಹತ್ಯೆ ಮಾಡಿಕೊಂಡಿರುವುದರ ಬಗ್ಗೆ

ಶ್ರೀ ಎನ್. ಚೆಲುವರಾಯಸ್ವಾಮಿ (ನಾಗಮಂಗಲ) : ಮಾನ್ಯ ಅಧ್ಯಕ್ಷರೆ, ನಿನ್ನೆ ನಮ್ಮ ಜಿಲ್ಲೆಯಲ್ಲಿ ಒಂದು ಘಟನೆ ನಡೆದಿದೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಮಂಡ್ಯ ತಾಲ್ಲೂಕಿನ ಬಿಳಿದೇಗಿಲು ಗ್ರಾಮದಲ್ಲಿ ತಮ್ಮೇಗೌಡ ಉರುಫ್ ಪುಟ್ಟಸ್ವಾಮಿ ಎಂಬ 60 ವರ್ಷದ ವ್ಯಕ್ತಿ ಸಾಲದ ಬಾಧೆಯನ್ನು ತಡೆಯಲಾರದೇ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ನಾವು ಇನ್ನೂ ಕೂಡ ಆತ್ಮಹತ್ಯೆಯನ್ನು ತಡೆಯುವುದಕ್ಕೆ ಅವರಿಗೆ ಸರ್ಕಾರ ಏನು ಸಹಾಯಧನವನ್ನು ಕೊಡುತ್ತಿದೆಯೋ ಅದರ ಜೊತೆಗೆ ಆತ್ಮಹತ್ಯೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ಜೊತೆ ನಾವೆಲ್ಲರೂ ಸೇರಿ ಚರ್ಚೆ ಮಾಡಿ ಆತ್ಮಹತ್ಯೆ ತಡೆಗಟ್ಟಲು ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಸರ್ಕಾರಕ್ಕೆ ನಾನು ವಿನಂತಿ ಮಾಡುತ್ತೇನೆ. ಏಕೆಂದರೆ ಸತ್ತವರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ಕೊಡುವುದು ದೊಡ್ಡದಲ್ಲ. ಒಬ್ಬರ ಪ್ರಾಣವನ್ನು ಉಳಿಸುವುದಕ್ಕೆ ನಾವು ಏನಾದರೊಂದು ಯೋಜನೆಯನ್ನು ಅಥವಾ ಜನರಿಗೆ ತಿಳುವಳಿಕೆ ಕೊಡುವುದರ ಮೂಲಕವೋ ಅಥವಾ ಇವೊತ್ತು ಸಾಲ ಮಾಡಿರತಕ್ಕಂಥವರಿಗೆ ಅವರಿಗೆ ಏನಾದರೂ ಸ್ವಲ್ಪ ಯಾವುದಾದರೂ ಒಂದು ರೀತಿಯಲ್ಲಿ ಸಹಕಾರವನ್ನು ಕೊಟ್ಟು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಪ್ಪಿಸಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ನಿನ್ನೆಯ ದಿನ ತಮ್ಮೇಗೌಡ ಉರುಫ್ ಪುಟ್ಟಸ್ವಾಮಿ ಏನು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಆತನ ಕುಟುಂಬಕ್ಕೆ ತಕ್ಷಣ ಪರಿಹಾರ ಕೊಡುವುದಕ್ಕೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಈಗಾಗಲೇ ನಾವು ಉಪ ಸಮಿತಿಯನ್ನು ಮಾಡಿದ್ದೇವೆ. ಅದರ ವರದಿ ಬಂದ ಮೇಲೆ ಹಣವನ್ನು ಕೊಡುತ್ತೇವೆ. ಇನ್ನು ಆತ್ಮಹತ್ಯೆ ತಡೆಗಟ್ಟಲು ಏನಾದರೂ ಮಾಡಬೇಕು ಎನ್ನುವ ನಿಟ್ಟಿನಲ್ಲಿ ಚೆಲುವರಾಯಸ್ವಾಮಿಯವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಆತ್ಮಹತ್ಯೆಗಳು ಮರುಕಳಿಸದಂತೆ ಮಾಡಲು ಏನಾದರೂ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿರುವ ಅವರ ಸಲಹೆಯನ್ನು ಸರ್ಕಾರ ಪರಿಶೀಲಿಸುತ್ತದೆ ಮತ್ತು ಆ

ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಹೇಳಬಯಸುತ್ತೇನೆ.

25. ಕೆ.ಹೆಚ್.ಎಸ್.ಡಿ.ಪಿ. ಕಡೆಯಿಂದ ವೆನ್‌ಲಾಕ್ ಆಸ್ಪತ್ರೆಯಲ್ಲಿ ಸುಮಾರು 5 ಕೋಟಿ ರೂ.ಗಳ ಕಾಮಗಾರಿ ನಡೆದಿದ್ದರೂ ಸೌಕರ್ಯ ಇಲ್ಲದಿರುವುದರ ಬಗ್ಗೆ

ಶ್ರೀ ಎನ್. ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದ ಸಂಗತಿಯೆಂದರೆ ಕೆ.ಹೆಚ್.ಎಸ್.ಡಿ.ಪಿ. ವತಿಯಿಂದ ವೆನ್‌ಲಾಕ್ ಆಸ್ಪತ್ರೆಯಲ್ಲಿ ಸುಮಾರು 5 ಕೋಟಿ ರೂಪಾಯಿಗಳ ಕಾಮಗಾರಿ ನಡೆದಿದೆ. ಅಲ್ಲಿ ಈ ಹಿಂದೆ ಎಲ್ಲಾ ವಾರ್ಡ್‌ಗಳಲ್ಲಿ ಕುಡಿಯುವ ನೀರು ಬರುತ್ತಿತ್ತು. ಈಗ ವಾರ್ಡ್‌ಗಳಲ್ಲಿ ಕುಡಿಯುವ ನೀರು ಬರುತ್ತಿಲ್ಲ. ಇನ್ನು ಎರಡನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳಿಂದ ಬಂದಿರುವಂಥ ಉತ್ತರದಲ್ಲಿ ಎಲ್ಲವೂ ಸಂಪೂರ್ಣವಾಗಿದೆ ಮತ್ತು ತೃಪ್ತಿಕರವಾಗಿದೆ ಎಂದು ಹೇಳಿದ್ದಾರೆ. ಅನೇಕ ಮಾಹಿತಿಗಳಿವೆ. ಅಲ್ಲಿರುವಂಥ ಆಪರೇಶನ್ ಥಿಯೇಟರ್‌ಗಳಲ್ಲಿ ಡಾಕ್ಟರ್‌ಗಳು ಎಲ್ಲಾದರೂ ಗೋಡೆಯನ್ನು ಮುಟ್ಟಿದರೆ ಶಾಕ್ ಹೊಡೆಯುತ್ತಿದೆ. ಮೊನ್ನೆತನಕ ಶಾಕ್ ಹೊಡೆಯುತ್ತಿತ್ತು. ಈಗ ದುರಸ್ತಿಯಾಗಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಇನ್ನು ಎರಡನೆಯದಾಗಿ ಆಪರೇಶನ್ ಥಿಯೇಟರ್‌ನಲ್ಲಿರುವ ಸ್ವಿಚ್‌ಗಳಲ್ಲಿ ಒಂದನ್ನು ಆನ್ ಮಾಡಿದರೆ ಕರೆಂಟ್ ಬರುತ್ತದೆ, ಎರಡನೆಯ ಸ್ವಿಚ್‌ನ್ನು ಆನ್ ಮಾಡಿದರೆ ಟ್ರಿಪ್ ಆಗಿ ಬಿಡುತ್ತದೆ. ಇಂಥ ದುಸ್ಥಿತಿ ಅಲ್ಲಿದೆ. ಇನ್ನು ಮೂರನೆಯದಾಗಿ, ಅಲ್ಲಿ ಶವಾಗಾರ ಇದೆ. ಆ ಶವಾಗಾರದಲ್ಲಿ ಹೆಣವನ್ನು ನೋಡುವುದಕ್ಕೆ ಹೋದವರು ಅಲ್ಲಿ ನೇತಾಡುತ್ತಿರುವಂಥ ಲೈನ್ ವೈರ್‌ನ್ನು ಏನಾದರೂ ಗೊತ್ತಿಲ್ಲದೇ ಮುಟ್ಟಿಬಿಟ್ಟರೆ ಅವರೇ ಹೆಣವಾಗುವಂಥ ದುಸ್ಥಿತಿ ಅಲ್ಲಿದೆ. ಒಂದು ಪ್ಲಾಸ್ಟಿಕ್ ಕವರ್ ಹಾಕಿ ತರಬೇಕೆನ್ನುವ ಕನಿಷ್ಟವಾದಂಥ ಕಾಮನ್‌ಸೆನ್ಸ್‌ನಿಂದ ಕೆಲಸ ಮಾಡಿಲ್ಲ. ಇನ್ನು ಅಲ್ಲಿ ಹಿಂದೆ ಸರಿ ಇದ್ದಂಥ ಒಳಚರಂಡಿ ವ್ಯವಸ್ಥೆ ಈಗ ಎಲ್ಲವೂ ಬ್ಲಾಕ್ ಆಗಿ ಮಣ್ಣು ತುಂಬಿಕೊಂಡಿದೆ. ಲಿಫ್ಟ್ ಕೂಡ ಅರ್ಧದಲ್ಲಿಯೇ ನಿಂತಿದೆ. ಆದಕಾರಣ ಇಂಥ ಅನೇಕ ಸಮಸ್ಯೆಗಳನ್ನು ಸರ್ಕಾರದ ಮುಂದೆ ಇಡುವುದಕ್ಕೆ ಬಯಸುತ್ತೇನೆ. ಅಲ್ಲಿಯ ಡಿ.ಹೆಚ್.ಓ. ವಿವರವಾಗಿ 19 ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದಿದದ್ದಾರೆ. ಆದರೆ ದುರಾದೃಷ್ಟವಶಾತ್ ಬೆಂಗಳೂರಿನಲ್ಲಿರುವಂಥ ಅಧಿಕಾರಿಗಳು ಅವರಿಗೆ ಏನು ಹೇಳುತ್ತಿದ್ದಾರೆಂದರೆ, ನೀವೂ ಕೂಡ ಸರ್ಕಾರಿ ಅಧಿಕಾರಿಗಳೇ ಆಗಿದ್ದೀರಿ, ಆದಕಾರಣ ಎಲ್ಲವೂ ಸರಿಯಾಗಿದೆ, ತೃಪ್ತಿಕರವಾಗಿದೆ ಎಂದು ಹೇಳುವಂಥ ಉತ್ತರ ಕೊಡಿ ಎಂದು ಒಂದು ರೀತಿಯಲ್ಲಿ ಅವರಿಗೆ ಒತ್ತಾಯ ಮಾಡುತ್ತಿದ್ದಾರೆ. ಆಗಿರುವಂಥಾದ್ದರ ಬಗ್ಗೆ ತಾವು ವಸ್ತುನಿಷ್ಠವಾಗಿ ಅಧ್ಯಯನವನ್ನು ನಡೆಸಬೇಕು ಮತ್ತು ಆಗಿರುವಂಥ ದೋಷಗಳ ಬಗ್ಗೆ ತನಿಖೆ ನಡೆಸಬೇಕು. ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ಕೊಟ್ಟಿರುವಂಥ, ನಿಯಮ 351ರಲ್ಲಿ ಕೊಟ್ಟಿರುವಂಥ ಉತ್ತರದಲ್ಲಿ ತಪ್ಪು ಉತ್ತರವನ್ನು ಕೊಟ್ಟಿದ್ದಾರೆ. ಎಲ್ಲಾ ಸಂಪೂರ್ಣ ತೃಪ್ತಿಕರವಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. **ಲಿಫ್ಟ್ ಅರ್ಧದಲ್ಲಿದೆ, ಕೆಲಸವಾಗಿಲ್ಲ. ಇದರ ಬಗ್ಗೆ ಸಮಗ್ರವಾದ ತನಿಖೆ ನಡೆಸಬೇಕು**